ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 735

ಸದಸ್ಯರ ಹೆಸರು : ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆ ಕ್ಷೇತ್ರದಿಂದ ಚುನಾಯಿತರಾದವರು)

ಉತ್ತರಿಸುವ ದಿನಾಂಕ : 05-03-2021.

ಉತ್ತರಿಸುವವರು : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.

ಕ್ರಸಂ	ಪ್ರಶ್ನೆ	ಉತ್ತರ
(ಅ)	ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕು ವ್ಯಾಪ್ತಿಯ ಹುಲಿಕೆರೆ ಗ್ರಾಮ ಪಂಚಾಯಿತಿ ಯಾವ ವರ್ಷ ಹೊಸದಾಗಿ ರಚನೆಯಾಗಿದೆ; (ವಿವರ ನೀಡುವುದು)	ಗ್ರಾಮ ಪಂಚಾಯಿತಿಗಳ ಪುನರ್ ವಿಂಗಡಣಾ ಮತ್ತು ಸರಹದ್ದುಗಳ ನಿರ್ಧರಣಾ ಸಮಿತಿಯು ಸಲ್ಲಿಸಿದ ವರದಿಯ ಶಿಫಾರಸ್ಸಿನನ್ವಯ ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 759 ಗ್ರಾಪಂಅ 2015 ದಿ: 09-01-2015 ರಲ್ಲಿ ಮಂಡ್ಯ ಜಿಲ್ಲೆ, ನಾಗಮಂಗಲ ತಾಲ್ಲೂಕು, ವ್ಯಾಪ್ತಿಯಲ್ಲಿ ಹುಲಿಕೆರೆ ಗ್ರಾಮ ಪಂಚಾಯಿತಿಯನ್ನು ಹೊಸದಾಗಿ ರಚನೆ ಮಾಡಲಾಗಿದೆ.
(ಆ)	ಸದರಿ ಗ್ರಾಮ ಪಂಚಾಯಿತಿಗೆ ಯಾವ ಯಾವ ಗ್ರಾಮಗಳು ಸೇರ್ಪಡೆಯಾಗಿವೆ; (ವಿವರ ನೀಡುವುದು)	ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ ರವರ ಅಧಿಸೂಚನೆ ಸಂಖ್ಯೆ ನಂ:ಇಎಲ್.ಎನ್(2)192/2014-15 ದಿನಾಂಕ 04/02/2015 ರಲ್ಲಿ ಹುಲಿಕೆರೆ ಮೆಳ್ಳಹಳ್ಳಿ, ಕೆಲಗೆರೆ, ದೊಡ್ಡೇಗೌಡನಕೊಪ್ಪಲು, ಕೆಲಗೆರೆಕಾವಲು, ಕನ್ನೇನಹಳ್ಳಿ, ಅರೇಹಳ್ಳಿ ದೇವೇಗೌಡನಕೊಪ್ಪಲು ಹೊನ್ನುಡಿಕೆಹಳ್ಳಿ, ತ್ಯಾಪೇನಹಳ್ಳಿ, ಅಂಕುಶಪುರ, ಚೋಳೇನಹಳ್ಳಿ, ಚೋಳೇನಹಳ್ಳಿಕೊಪ್ಪಲು, ನರಗನಹಳ್ಳಿ ಮಲ್ಲರಾಜಪುರ, ನೀಲಕಂಠನಹಳ್ಳಿ, ಕಬ್ಬಿನಕೆರೆ ವಡೇರಪುರ ಗ್ರಾಮಗಳನ್ನೊಳಗೊಂಡಂತೆ ಹುಲಿಕೆರೆ ಗ್ರಾಮ ಪಂಚಾಯತಿ ಕೇಂದ್ರ ಸ್ಥಾನವನ್ನಾಗಿ ಮಾಡಿ ಹುಲಿಕೆರೆ ಗ್ರಾಮ ಪಂಚಾಯಿತಿಗೆ ಸೇರ್ಪಡೆಗೊಂಡಿರುತ್ತವೆ. ಮಂಡ್ಯ ಜಿಲ್ಲಾಧಿಕಾರಿಗಳ ಅಧಿಸೂಚನೆ ಪ್ರತಿಯನ್ನು ಅನುಬಂಧ-1 ರಲ್ಲಿ ನೀಡಿದೆ. ತದನಂತರ ಗೌಡರಹಳ್ಳಿ ಮತ್ತು ಕರಡಹಳ್ಳಿ ಗ್ರಾಮಸ್ಥರ ಮೇಲ್ಮನವಿಯಂತೆ ಪ್ರಾದೇಶಿಕ ಆಯುಕ್ತರು, ಮೈಸೂರು ವಿಭಾಗ ರವರ ಆದೇಶ ಸಂಖ್ಯೆ:ಇಎಲ್.ಎನ್. ಸಿಆರ್.94(3):2014-15, ದಿನಾಂಕ 10-03-2015 ಮತ್ತು ಆದೇಶ ಸಂಖ್ಯೆ:ಇಎಲ್.ಎನ್. ಸಿಆರ್.94(4):2014-15, ದಿನಾಂಕ:10-03-2015 ರ ಆದೇಶದಲ್ಲಿ ಹುಲಿಕೆರೆ ಮೆಳ್ಳಹಳ್ಳಿ, ಕೆಲಗೆರೆ, ದೊಡ್ಡೇಗೌಡನಕೊಪ್ಪಲು, ಕೆಲಗೆರೆಕಾವಲು,ಕನ್ನೇನಹಳ್ಳಿ, ಅರೇಹಳ್ಳಿ ದೇವೇಗೌಡನಕೊಪ್ಪಲು ಹೊನ್ನುಡಿಕೆಹಳ್ಳಿ, ತ್ಯಾಪೇನಹಳ್ಳಿ, ಅಂಕುಶಪುರ, ಚೋಳೇನಹಳ್ಳಿ, ಚೋಳೇನಹಳ್ಳಿಕೊಪ್ಪಲು, ನರಗನಹಳ್ಳಿ ಮಲ್ಲರಾಜಪುರ, ನೀಲಕಂಠನಹಳ್ಳಿ ಗ್ರಾಮಗಳು, **ಅಂಚೆ ಚಿಟ್ಟನಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಕರಡಹಳ್ಳಿ** ಗ್ರಾಮವನ್ನು ಮತ್ತು **ಮಾಯಿಗೋನಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಗೌಡರಹಳ್ಳಿ ಗ್ರಾಮವನ್ನು ಹುಲಿಕೆರೆ ಗ್ರಾಮ ಪಂಚಾಯಿತಿಗೆ** ಸೇರ್ಪಡೆ ಮಾಡಿ ಪ್ರಾದೇಶಿಕ ಆಯುಕ್ತರು ಆದೇಶ ಹೊರಡಿಸಿರುತ್ತಾರೆ. ಪ್ರಾದೇಶಿಕ ಆಯುಕ್ತರು, ಮೈಸೂರು ವಿಭಾಗ ರವರ ಆದೇಶದ ಪ್ರತಿಗಳನ್ನು ಅನುಬಂಧ-2 ರಲ್ಲಿ ನೀಡಿದೆ.

(ಇ)	ಹುಲಿಕೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರುವ ಗೌಡರಹಳ್ಳಿ ಮತ್ತು ಕರಡಹಳ್ಳಿ ಗ್ರಾಮವು ನರೇಗಾ, ಮನೆಗಳ ಖಾತೆ, ಗ್ರಾಮದ ಮೂಲಭೂತ ಸೌಲಭ್ಯ ಒದಗಿಸಲು ಪಂಚಾಯಿತಿಯಲ್ಲಿ ಸದರಿ ಗ್ರಾಮಗಳಿಗೆ ಸಂಬಂಧಿಸಿದಂತೆ ಯಾವ ದಾಖಲೆಗಳು ಲಭ್ಯವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹುಲಿಕೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರುವ ಗೌಡರಹಳ್ಳಿ ಮತ್ತು ಕರಡಹಳ್ಳಿ ಗ್ರಾಮಗಳು ಪಂಚತಂತ್ರ ತಂತ್ರಾಂಶ, ಇ-ಸ್ವತ್ತು ತಂತ್ರಾಂಶ ಮತ್ತು ಮಹಾತ್ಮ ಗಾಂಧಿ ನರೇಗಾ ತಂತ್ರಾಂಶದಲ್ಲಿ ಸೇರ್ಪಡೆಯಾಗಿದ್ದು, ತೆರಿಗೆ ವಸೂಲಾತಿ ವಿವರ, ಇ-ಸ್ವತ್ತು ತಂತ್ರಾಂಶದ ಮೂಲಕ ನಮೂನೆ-9, 11 ಎ ಮತ್ತು 11ಬಿ ಗಳನ್ನು ನೀಡಲಾಗುತ್ತಿದೆ.
(ಈ)	ಹೊಸ ಪಂಚಾಯಿತಿ ರಚನೆಯಾಗಿ ಸುಮಾರು ವರ್ಷಗಳು ಕಳೆದರೂ ಈವರೆಗೆ ಗೌಡರಹಳ್ಳಿ ಮತ್ತು ಕರಡಹಳ್ಳಿ ಗ್ರಾಮಗಳ ಜನತೆಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಬಗ್ಗೆ ಸದರಿ ಗ್ರಾಮದ ಜನತೆಗೆ ಯಾವ ಪರ್ಯಾಯ ವ್ಯವಸ್ಥೆ ಮಾಡಲಾಗಿದೆ; (ಸಂಪೂರ್ಣ ವಿವರ ನೀಡುವುದು)	ಗೌಡಗೆರೆ ಮತ್ತು ಕರಡಹಳ್ಳಿ ಗ್ರಾಮಗಳನ್ನು ಇತ್ತೀಚಿಗೆ ಮಹಾತ್ಮ ಗಾಂಧಿ ನರೇಗಾ ತಂತ್ರಾಂಶದಲ್ಲಿ ಸೇರ್ಪಡೆ ಮಾಡಲಾಗಿದ್ದು, ಇನ್ನು ಮುಂದೆ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತದೆ. ಇನ್ನುಳಿದ ಗ್ರಾಮ ಪಂಚಾಯಿತಿ ಯೋಜನೆಗಳಿಂದ ಗೌಡಗೆರೆ ಮತ್ತು ಕರಡಹಳ್ಳಿ ಎರಡು ಗ್ರಾಮಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಮತ್ತು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿರುತ್ತದೆ. ಕಳೆದ 5 ವರ್ಷಗಳಲ್ಲಿ ಕೈಗೊಂಡಿರುವ ಕಾಮಗಾರಿಗಳ ವಿವರಗಳನ್ನು ಅನುಬಂಧ-3 ರಲ್ಲಿ ನೀಡಿದೆ.
(ಉ)	ಈ ವಿಳಂಬಕ್ಕೆ ತೊಂದರೆಗೆ ಕಾರಣದ ಅಧಿಕಾರಿಗಳ ವಿರುದ್ಧ ಈವರೆವಿಗೂ ಶಿಸ್ತುಕ್ರಮ ಕೈಗೊಳ್ಳದೆ ಇರಲು ಕಾರಣವೇನು; ಕೈಗೊಂಡಿದ್ದಲ್ಲಿ ಸಂಪೂರ್ಣ ವಿವರ ನೀಡುವುದು?	ಮಹಾತ್ಮ ಗಾಂಧಿ ನರೇಗಾ ತಂತ್ರಾಂಶದಲ್ಲಿ ಗೌಡರಹಳ್ಳಿ ಮತ್ತು ಕರಡಹಳ್ಳಿ ಗ್ರಾಮಗಳನ್ನು ಸೇರ್ಪಡೆ ಮಾಡಲು ವಿಳಂಬಕ್ಕೆ ಕಾರಣರಾದ, ನಿರ್ಲಕ್ಷ್ಯತೆ ತೋರಿರುವ ಹಿಂದಿನ ಹಾಗೂ ಪ್ರಸ್ತುತ ಹುಲಿಕೆರೆ ಗ್ರಾಮ ಪಂಚಾಯಿತಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಾದ ಎಂ.ಜೆ.ನಾಗರಾಜು, ಎನ್.ಜಿ.ಯೋಗಾನಂದ, ಆರ್.ಎಂ.ರವಿಕುಮಾರ್, ಬಿ.ಆರ್.ಶಿವಲಿಂಗೇಗೌಡ, ಬಿ.ಶಿವಲಿಂಗೇಗೌಡ, ಕೆ.ಲಿಂಗಯ್ಯ, ಎನ್.ಜಿ.ಯೋಗಾನಂದ, ಆರ್.ಹೆಚ್.ರವಿಕುಮಾರ್, ಎಸ್.ಆರ್.ರೂಪಶ್ರೀ ಹಾಗೂ ನಾಗಮಂಗಲ ತಾಲ್ಲೂಕು ಪಂಚಾಯಿತಿ ಸಹಾಯಕ ನಿರ್ದೇಶಕರು(ಗ್ರಾಮೀಣ ಉದ್ಯೋಗ) ಗಳಾದ ರವಿಕಾಂತಮಣಿ, ನಾಗೇಂದ್ರ ಜಿ.ಆರ್, ರವೀಂದ್ರ ಕೆ.ಎಂ ಮತ್ತು ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳಾದ ಬೆಟ್ಟಸ್ವಾಮಿಗೌಡ, ಶಾಂತ, ಎಂ (ಪ್ರಭಾರ), ಶಿವರಾಜಯ್ಯ, ಕೆ.ಎಂ.ರವೀಂದ್ರ (ಪ್ರಭಾರ), ಎಂ.ಆರ್.ಅನಂತರಾಜು ಮತ್ತು ರಾಮಯ್ಯ ಎಂ.ಡಿ, ರವರುಗಳ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳಲು ಉದ್ದೇಶಿಸಿ ದಿನಾಂಕ:02.03.2021ರಂದು ಕಾರಣ ಕೇಳಿ ನೋಟಿಸ್ ನೀಡಲಾಗಿದೆ. ವಿವರಣೆ ಪಡೆದು ನಿಯಮಾನುಸಾರ ಶಿಸ್ತು ಕ್ರಮ ಜರುಗಿಸಲಾಗುತ್ತದೆ.

ಸಂ. ಗ್ರಾಅಪ 88 ಗ್ರಾಪಂಅ 2021

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು.

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

ಅನುಬಂಧ-1

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಮಂಡ್ಯ ಜಿಲ್ಲೆ, ಮಂಡ್ಯ

Tel Ph: 08232-224600, 226074 Fax: 08232-221417 email: deo.mandya@gmail.com

ಇಎಲ್‌ಎನ್(2)182/2014-15 ದಿನಾಂಕ:04-02-2015

ಅಧಿಸೂಚನೆ

ಗ್ರಾಮ ಪಂಚಾಯಿತಿಗಳ ಪುನರ್ ವಿಂಗಡಣಾ ಸಮಿತಿಯ ಶಿಫಾರಸ್ಸನ್ನು ಅನುಸರಿಸಿ ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕಿನಲ್ಲಿ ಹೊಸ ಗ್ರಾಮಪಂಚಾಯಿತಿಯನ್ನು ರಚಿಸಲು ಮತ್ತು ಕೆಲವು ಗ್ರಾಮಪಂಚಾಯಿತಿಗಳಲ್ಲಿನ ಹಲವು ಗ್ರಾಮಗಳನ್ನು ಬೇರೊಂದು ಗ್ರಾಮಪಂಚಾಯಿತಿ ವ್ಯಾಪ್ತಿಗೆ ವರ್ಗಾಯಿಸಲು ಕ್ರಮಕೈಗೊಳ್ಳುವಂತೆ ಸರ್ಕಾರದ ಪತ್ರದ ಸಂಖ್ಯೆ: ಗ್ರಾಅಪ 10 ಗ್ರಾಪಂಅ 2015 ದಿನಾಂಕ:09-01-2015 ರಲ್ಲಿ ಸರ್ಕಾರವು ಸೂಚನೆ ನೀಡಿರುತ್ತದೆ.

ಈ ಮೇರೆಗೆ, ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 ರ 4 ನೇ ಪ್ರಕರಣದ (2) ನೇ ಉಪಪ್ರಕರಣದಿಂದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನಲ್ಲಿ ಹೊಸದಾಗಿ ರಚಿಸಲಾಗುತ್ತಿರುವ ಗ್ರಾಮಪಂಚಾಯಿತಿ ಮತ್ತು ಪುನರ್ ವಿಂಗಡಣೆ ಮಾಡುತ್ತಿರುವ ಗ್ರಾಮಪಂಚಾಯಿತಿಗಳ ಹೆಸರು, ಕೇಂದ್ರಸ್ಥಾನ ಹಾಗೂ ಸದರಿ ಗ್ರಾಮಪಂಚಾಯಿತಿಗಳ ವ್ಯಾಪ್ತಿಗೆ ಸೇರಿರುವ ಗ್ರಾಮಗಳ ವಿವರಗಳನ್ನು ದಿನಾಂಕ:19-01-2015 ರಂದು ಕರಡು ಅಧಿಸೂಚನೆಯ ಮೂಲಕ ಪ್ರಕಟಿಸಿ, ಸದರಿ ಕರಡು ಅಧಿಸೂಚನೆಯ ಪ್ರತಿಯನ್ನು ಜಿಲ್ಲೆಯ ಸಂಬಂಧಿತ ಪ್ರಮುಖ ಕಛೇರಿಗಳ ಪ್ರಕಟಣಾ ಫಲಕದಲ್ಲಿ ಹಾಗೂ ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸಿ ಸಾರ್ವಜನಿಕರ ಮಾಹಿತಿಗಾಗಿ ಲಭ್ಯಗೊಳಿಸಿ, ಈ ಕರಡು ಅಧಿಸೂಚನೆಯಿಂದ ಬಾಧಿತರಾಗಬಹುದಾದಂತಹ ವ್ಯಕ್ತಿಗಳು ಕರಡು ಅಧಿಸೂಚನೆ ಪ್ರಕಟಿಸಿದ ದಿನಾಂಕ:19-01-2015 ರಿಂದ ದಿನಾಂಕ:29-01-2015 ರೊಳಗೆ ಕಛೇರಿ ವೇಳೆಯಲ್ಲಿ, ಯಾವುದೇ ಸಲಹೆ, ಆಕ್ಷೇಪಣೆಗಳನ್ನು ಕಾರಣ ಸಹಿತ ಲಿಖಿತದಲ್ಲಿ ಜಿಲ್ಲಾಧಿಕಾರಿ, ಮಂಡ್ಯ ಜಿಲ್ಲೆ, ಮಂಡ್ಯ ರವರಿಗೆ ಸಲ್ಲಿಸಬಹುದಾಗಿದೆ ಎಂದು ಆಹ್ವಾನಿಸಲಾಗಿತ್ತು.

ನಿಗಧಿತ ಅವಧಿಯಲ್ಲಿ ಸ್ವೀಕೃತವಾದ ಸಲಹೆಗಳು / ಆಕ್ಷೇಪಣೆಗಳನ್ನು ಪರಿಶೀಲಿಸಿ ಇತ್ಯರ್ಥಪಡಿಸಲಾಗಿದೆ.

ಈ ಬಗ್ಗೆ, ಮಂಡ್ಯ ಜಿಲ್ಲೆಯ ಜಿಲ್ಲಾಧಿಕಾರಿ ಡಾ: ಅಜಯ್‌ನಾಗಭೂಷಣ್ ಎಂ.ಎನ್., ಐ.ಎ.ಎಸ್., ಆದ ನಾನು ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 ರ 4 ನೇ ಪ್ರಕರಣದ (2) ನೇ ಉಪಪ್ರಕರಣದಿಂದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನಲ್ಲಿ ಹೊಸದಾಗಿ ರಚಿಸಲಾಗುತ್ತಿರುವ ಗ್ರಾಮಪಂಚಾಯಿತಿ ಮತ್ತು ಪುನರ್ ವಿಂಗಡಣೆ ಮಾಡುತ್ತಿರುವ ಗ್ರಾಮಪಂಚಾಯಿತಿಗಳ ಹೆಸರು, ಕೇಂದ್ರಸ್ಥಾನ ಹಾಗೂ ಸದರಿ ಗ್ರಾಮಪಂಚಾಯಿತಿಗಳ ವ್ಯಾಪ್ತಿಗೆ ಸೇರಿರುವ ಗ್ರಾಮಗಳ ವಿವರಗಳನ್ನು ಈ ಕೆಳಕಂಡಂತೆ ಪ್ರಕಟಿಸಿರುತ್ತೇನೆ.

ಕ್ರ ಸಂ	ಗ್ರಾಮಪಂಚಾಯಿತಿ ಹೆಸರು.	ಗ್ರಾಮಪಂಚಾಯಿತಿ ಕೇಂದ್ರ ಸ್ಥಾನ	ಗ್ರಾಮಪಂಚಾಯಿತಿ ವ್ಯಾಪ್ತಿಗೆ ಸೇರಿರುವ ಗ್ರಾಮಗಳು
1	2	3	4
1	ಅಂಚೆಚಿಟ್ಟನಹಳ್ಳಿ	ಅಂಚೆಚಿಟ್ಟನಹಳ್ಳಿ	ಅಂಚೆಚಿಟ್ಟನಹಳ್ಳಿ ಮಚ್ಚನಕೊಪ್ಪಲು(ದಾ) ವೈರಸಹಳ್ಳಿ ಕರಡಹಳ್ಳಿ ಬಿಡದಿಬುಡುಕ ಕಾಲೋನಿ (ದಾ)

-2-

1	2	3	4
			ಬೇಗಮಂಗಲ ರಾಮದೇವನಹಳ್ಳಿ ಅಂಚೆಬೂವನಹಳ್ಳಿ ಚಿಕ್ಕಜಟಕ ಗೊಲ್ಲರಹಟ್ಟಿ (ದಾ) ಕೃಷ್ಣಾಪುರ ಕಾಚೇನಹಳ್ಳಿ ತೊಲಲಿ ಉಪ್ಪಾರಹಳ್ಳಿ ಅರಸೇಗೌಡನಕೊಪ್ಪಲು(ದಾ) ಬಸವೇಶ್ವರನಗರ(ದಾ) ಚೌಡೇನಹಳ್ಳಿ
2	ಮಾಯಿಗೋನಹಳ್ಳಿ	ಮಾಯಿಗೋನಹಳ್ಳಿ	ಮಾಯಿಗೊನಹಳ್ಳಿ ಗಂಗರಹಳ್ಳಿ ಗೌಡರಹಳ್ಳಿ ಪರಗಲು ಶಿವನಹಳ್ಳಿ ಹೂವಿನಹಳ್ಳಿ ಪಿ. ನೇರಳೆಕೆರೆ ಸಿಂಗಾರಮ್ಮನಕೊಪ್ಪಲು(ದಾ) ಲಾಯದಕೊಪ್ಪಲು(ದಾ) ಹಾಳಪ್ಪನ ಕೊಪ್ಪಲು(ದಾ) ಕಡೇನಹಳ್ಳಿ(ದಾ) ಪಿ ಮಲ್ಲೇನಹಳ್ಳಿ ಪಡುವಲಪಟ್ಟಣ ಬ್ಯಾಟರಾಯನಕೊಪ್ಪಲು(ದಾ)
3	ನಲ್ಲಿಗೆರೆ	ನಲ್ಲಿಗೆರೆ	ನಲ್ಲಿಗೆರೆ ತೊರೆಮಾವಿನಕೆರೆ ಕಾರಬೈಲು ಹಾಲಾಳು ತಾವರೆಕೆರೆ ಎಲೆಕೊಪ್ಪ ತಿಗಳರಪಾಳ್ಯ (ದಾ) ಕಂಚಿನಕೋಟೆ ಗೌಡರಹಳ್ಳಿ(ಬೇ) ಗಾಣಸಂದ್ರ

1	2	3	4
			ವಡ್ಡರಹಳ್ಳಿ ಕೋಟೆರಾಮನಕೊಪ್ಪಲು (ದಾ) ಕರೀಚೀರಹಳ್ಳಿ ಹೊಸೂರು ಕಾಲೋನಿ (ದಾ) ಯಲಾದಹಳ್ಳಿ ಹೊಸಮನೆಕಾಲೋನಿ (ದಾ) ಸೂರನಹಳ್ಳಿ ಸೀಗೇಹಳ್ಳಿ ದೊಡ್ಡಬಿಟಿಕ. ಹಂಪಾಪುರ ಹೊಸಹಳ್ಳಿ ದುಮ್ಮಸಂದ್ರ ಚೋಳಸಂದ್ರ ವಳಗೆರೆಪುರ ಕುಪ್ಪೆ
4	ಹುಲಿಕೆರೆ	ಹುಲಿಕೆರೆ	ಹುಲಿಕೆರೆ ಮಳ್ಳಹಳ್ಳಿ ಕೆಲಗೆರೆ ದೊಡ್ಡೇಗೌಡನಕೊಪ್ಪಲು (ದಾ) ಕೆಲಗೆರೆ ಕಾವಲು (ಬೇ) ಕನ್ನೇನಹಳ್ಳಿ ಅರೇಹಳ್ಳಿ ದೇವೇಗೌಡನಕೊಪ್ಪಲು(ದಾ) ಹೊನ್ನುಡಿಕೆಹಳ್ಳಿ ತ್ಯಾಪೇನಹಳ್ಳಿ ಅಂಕುಶಾಪುರ ಚೋಳೇನಹಳ್ಳಿ ಚೋಳೇನಹಳ್ಳಿ ಕೊಪ್ಪಲು(ದಾ) ನರಗನಹಳ್ಳಿ ಮಲ್ಲರಾಜಪುರ ನೀಲಕಂಠನಹಳ್ಳಿ ಕಬ್ಬನಕೆರೆ ವಡೇಯರಪುರ

(ಡಾ: ಅಜಯ್ ನಾಗಭೂಷಣ್, ಐ.ಎ.ಎಸ್.)
ಜಿಲ್ಲಾಧಿಕಾರಿ,
ಮಂಡ್ಯ ಜಿಲ್ಲೆ, ಮಂಡ್ಯ.

ಅನುಬಂಧ-2

52

ಪ್ರಾದೇಶಿಕ ಆಯುಕ್ತರು, ಮೈಸೂರು ವಿಭಾಗ, ಮೈಸೂರುರವರ ನಡವಳಿ

ವಿಷಯ:- ಗ್ರಾಮ ಪಂಚಾಯತಿ ಪುನರ್ ವಿಂಗಡಣಾ ಸಮಿತಿ ವರದಿ-2014 ಶಿಫಾರಸ್ಸು ಮಾಡಿದ ನೂತನ ಗ್ರಾಮ ಪಂಚಾಯತಿಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ, ಮಂಡ್ಯ ರವರು ದಿನಾಂಕ:04-02-2015ರಂದು ಹೊರಡಿಸಿದ ಅಂತಿಮ ಅಧಿಸೂಚನೆಗೆ ಸಂಬಂಧಿಸಿದಂತೆ ಶ್ರೀ ಜಿ.ಎನ್.ನಾಗರಾಜು, ಗೌಡರಹಳ್ಳಿ ಮತ್ತು ಕರಡಹಳ್ಳಿ ಗ್ರಾಮಸ್ಥರು, ಹುಲಿಕೆರೆ ಅಂಚೆ, ಕಸಬಾ ಹೋಬಳಿ ಇವರು ಸಲ್ಲಿಸಿರುವ ಮೇಲ್ಮನವಿ ಕುರಿತು.

ಉಲ್ಲೇಖ:-1) ಸರ್ಕಾರದ ಪತ್ರ ಸಂಖ್ಯೆ: ಗ್ರಾಅಪ 10 ಗ್ರಾಪಂಅ 2015 ದಿನಾಂಕ:09-01-2015.

2) ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ, ಮಂಡ್ಯ ರವರ ಅಂತಿಮ ಅಧಿಸೂಚನೆ ಸಂಖ್ಯೆ: ಇಎಲ್ಎನ್ (2) ಸಿಆರ್ /192/2014-15 ದಿನಾಂಕ:04-02-2015.

3) ಶ್ರೀ ಜಿ.ಎನ್.ನಾಗರಾಜು, ಗೌಡರಹಳ್ಳಿ ಮತ್ತು ಕರಡಹಳ್ಳಿ ಗ್ರಾಮಸ್ಥರು, ಹುಲಿಕೆರೆ ಅಂಚೆ, ಕಸಬಾ ಹೋಬಳಿ ಇವರು ಸಲ್ಲಿಸಿರುವ ಮೇಲ್ಮನವಿ ದಿನಾಂಕ:26-02-2015 (ಈ ಕಛೇರಿಗೆ ಸ್ವೀಕೃತಗೊಂಡ ದಿನಾಂಕ:26-02-2015).

4) ಈ ಕಛೇರಿಯ ತಿಳುವಳಿಕೆ ಪತ್ರ ಸಂಖ್ಯೆ: ಚುನಾವಣೆ ಸಿಆರ್ 94/2014-15 ದಿನಾಂಕ:02-03-2015.

*****

ಪ್ರಸ್ತಾವನೆ:-

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರಂತೆ ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆರವರಿಗೆ ಗ್ರಾಮ ಪಂಚಾಯತಿಗಳ ಪುನರ್ ವಿಂಗಡಣೆ ಮತ್ತು ಹೊಸ ಗ್ರಾಮ ಪಂಚಾಯತಿಗಳ ರಚನೆ ಕುರಿತು ಅಧಿಸೂಚನೆ ಹೊರಡಿಸುವ ಬಗ್ಗೆ ಬರೆದಿರುವ ಪತ್ರದ ಕಂಡಿಕೆ (4)ರಲ್ಲಿ ಜಿಲ್ಲಾಧಿಕಾರಿಗಳು ಪ್ರಕಟಿಸುವ ಅಂತಿಮ ಅಧಿಸೂಚನೆಯಿಂದ ಬಾಧಿತರಾದ ವ್ಯಕ್ತಿಗಳಿಂದ ಮೇಲ್ಮನವಿಗಳನ್ನು ಸಂಬಂಧಿಸಿ ಪ್ರಾದೇಶಿಕ ಆಯುಕ್ತರಿಗೆ ಸಲ್ಲಿಸಲು ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 4(3)ರಡಿ ಅವಕಾಶ ಕಲ್ಪಿಸಲಾಗಿದೆ. ಸದರಿ ಸರ್ಕಾರದ ಪತ್ರದೊಂದಿಗೆ ಲಗತ್ತಿಸಿರುವ ವೇಳಾಪಟ್ಟಿಯಲ್ಲಿ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 4(3)ರನ್ವಯ ಜಿಲ್ಲಾಧಿಕಾರಿಗಳ ಅಧಿಸೂಚನೆಯಿಂದ ಬಾಧಿತರಾದ ಸಾರ್ವಜನಿಕರು ಸಂಬಂಧಿಸಿದ ಪ್ರಾದೇಶಿಕ ಆಯುಕ್ತರಿಗೆ ಮೇಲ್ಮನವಿ ಸಲ್ಲಿಸಲು ದಿನಾಂಕ:05-02-2015 ರಿಂದ 30 ದಿನಗಳ ಅಂದರೆ ದಿನಾಂಕ:05-03-2015ರವರೆಗೆ ಕಾಲಾವಕಾಶ ನೀಡಲಾಗಿರುತ್ತದೆ. ನಂತರ ಸಂಬಂಧಿಸಿದ ಪ್ರಾದೇಶಿಕ ಆಯುಕ್ತರುಗಳು ಮೇಲ್ಮನವಿಯನ್ನು ಪರಿಶೀಲಿಸಿ, ದಿನಾಂಕ:10-03-2015ಕ್ಕೆ ವಿಲೇವಾರಿಗೊಳಿಸಲು ತಿಳಿಸಲಾಗಿರುತ್ತದೆ.

ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ, ಮಂಡ್ಯ ರವರು ದಿನಾಂಕ:19-01-2015ರಂದು ಕರಡು ಅಧಿಸೂಚನೆಯನ್ನು ಪ್ರಕಟಿಸಿ, ಸಾರ್ವಜನಿಕರ ಮಾಹಿತಿಗಾಗಿ, ಸಲಹೆ ಹಾಗೂ ಆಕ್ಷೇಪಣೆಗಳನ್ನು ಪಡೆಯಲು ಕನಿಷ್ಠ 10 ದಿನಗಳ ಕಾಲಾವಕಾಶಗಳನ್ನು ಕಲ್ಪಿಸಿ ಸಾರ್ವಜನಿಕರಿಂದ ಸ್ವೀಕರಿಸುವ ಆಕ್ಷೇಪಣೆ

ನಿಜ ಪ್ರತಿ ದೃಢೀಕರಿಸಿದೆ

[signature]

ಆಯುಕ್ತರ ಕಚೇರಿ

ವಿಭಾಗ, ಮೈಸೂರು

ಬಂತ್ತು ಸಲಹೆಗಳನ್ನು ಪರಿಶೀಲಿಸಿ ಅಂತಿಮ ಅಧಿಸೂಚನೆಯನ್ನು ಕರ್ನಾಟಕ ರಾಜ್ಯ ಗೆಜೆಟ್ ಪತ್ರಿಕೆಯ ದಿನಾಂಕ:04-02-2015ರಂದು ಪ್ರಕಟಿಸುವಂತೆ ನಿರ್ದೇಶನ ನೀಡಲಾಗಿರುತ್ತದೆ.

ಸರ್ಕಾರದ ನಿರ್ದೇಶನದಂತೆ, ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ, ಮಂಡ್ಯ ರವರು (ಉಲ್ಲೇಖ(2)ರ ಅಂತಿಮ ಅಧಿಸೂಚನೆ ಹೊರಡಿಸಿರುತ್ತಾರೆ.

ಜಿಲ್ಲಾಧಿಕಾರಿಗಳ ದಿನಾಂಕ:04-02-2015ರ ಅಂತಿಮ ಅಧಿಸೂಚನೆಗೆ ಸಂಬಂಧಪಟ್ಟ ಉಲ್ಲೇಖ(3)ರಲ್ಲಿ ಶ್ರೀ ಜಿ.ಎನ್.ನಾಗರಾಜು, ಗೌಡರಹಳ್ಳಿ ಮತ್ತು ಕರಡಹಳ್ಳಿ, ಗ್ರಾಮಸ್ಥರು, ಹುಲಿ ಅಂಚೆ, ಕಸಬಾ ಹೋಬಳಿ ಇವರು ದಿನಾಂಕ:26/02/2015ರಂದು ಮೇಲ್ಮನವಿ ಸಲ್ಲಿಸಿ, ಮೇಲ್ಮನವಿಯ "ಹೆಚ್ಚುವರಿ ಪುನರ್ ವಿಂಗಡಣಾ ವ್ಯವಸ್ಥೆಯಲ್ಲಿ ಕರಡಹಳ್ಳಿ ಮತ್ತು ಬುಡಬುಡಿಕೆ ಕಾಲ ಗ್ರಾಮಗಳನ್ನು ಅಂಚೆಚಿಟ್ಟನಹಳ್ಳಿ ಗ್ರಾಮಪಂಚಾಯಿತಿಯಿಂದ ಹಿಂಪಡೆದು ಹುಲಿ ಗ್ರಾಮಪಂಚಾಯಿತಿಯಲ್ಲಿ ಮುಂದುವರೆಸುವಂತೆ ಕೋರಿರುತ್ತಾರೆ.

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 4(3)ರಂತೆ ಉಲ್ಲೇಖ(4) ಈ ಕಛೇರಿಯಿಂದ ಮೇಲ್ಮನವಿದಾರರಾದ ಶ್ರೀ ಜಿ.ಎನ್.ನಾಗರಾಜು, ಗೌಡರಹಳ್ಳಿ ಮತ್ತು ಕರಡ ಗ್ರಾಮಸ್ಥರು, ಹುಲಿಕೆರೆ ಅಂಚೆ, ಕಸಬಾ ಹೋಬಳಿ ರವರಿಗೆ ದಿನಾಂಕ:06-03-2015ರಂದು ಮೇಲ್ಮ ಕುರಿತು ವಿಚಾರಣೆಗೆ ಹಾಜರಾಗುವಂತೆ ತಿಳುವಳಿಕೆ ಪತ್ರ ನೀಡಲಾಗಿತ್ತು.

ಅದರಂತೆ ಮೇಲ್ಮನವಿದಾರರು ದಿನಾಂಕ:06-03-2015ರಂದು ವಿಚಾರಣೆಗೆ ಹಾಜರಾಗಿ ಕೆಳಕಂಡ ಹೇಳಿಕೆ ನೀಡಿರುತ್ತಾರೆ.

"ಈಗಾಗಲೇ ನಾನು ಮಾನ್ಯ ಪ್ರಾದೇಶಿಕ ಆಯುಕ್ತರಿಗೆ ದಿನಾಂಕ:26-02-2015ರ ಲಿಖಿತವಾಗಿ ಸಲ್ಲಿಸಿರುವ ಮೇಲ್ಮನವಿಯಲ್ಲಿನ ವಿಷಯವನ್ನೆ ನನ್ನ ಹೇಳಿಕೆಯೆಂದು ಪರಿಗಣಿಸಬೇಕೆ ಕೋರುತ್ತೇನೆ.''

ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ, ಮಂಡ್ಯ ರವರ ಪರವಾಗಿ ಶ್ರೀ ದಿನೇಶ್‌ಚಂದ್ರ, ತಹಶೀಲ (ಚುನಾವಣೆ), ಜಿಲ್ಲಾಧಿಕಾರಿಗಳ ಕಛೇರಿ, ಮಂಡ್ಯ ಜಿಲ್ಲೆ, ಮಂಡ್ಯ ದಿನಾ 06-03-2015 ರಂದು ವಿಚಾರಣೆಗೆ ರವರು ಹಾಜರಾಗಿ ಪ್ರಕರಣಕ್ಕೆ ಸಂಬಂಧಿಸಿದಂತೆ, ಮಾಹಿತಿಯ ನೀಡಲು ಕಾಲಾವಕಾಶವನ್ನು ಕೋರಿದ್ದರ ಮೇರೆಗೆ ಪ್ರಕರಣವನ್ನು ದಿನಾಂಕ:09-03-2015 ಮುಂದೂಡಲಾಗಿತ್ತು.

ದಿನಾಂಕ:09-03-2015 ರಂದು ಪ್ರಕರಣವನ್ನು ಕೂಗಿಸಲಾಯಿತು. ಜಿಲ್ಲಾಧಿಕಾರಿಗಳು, ಮ ಜಿಲ್ಲೆ, ಮಂಡ್ಯ ರವರ ಪರವಾಗಿ ಶ್ರೀ ದಿನೇಶ್‌ಚಂದ್ರ, ತಹಶೀಲ್ದಾರ್ (ಚುನಾವಣೆ), ಜಿಲ್ಲಾಧಿಕಾರಿ ಕಛೇರಿ, ಮಂಡ್ಯ ಜಿಲ್ಲೆ, ಮಂಡ್ಯ ಇವರು ಹಾಜರಿದ್ದು, ಪ್ರಕರಣಕ್ಕೆ ಸಂಬಂಧಿಸಿದಂತೆ, ಈ ಕೆಳಕಂಡ ಹೇಳಿಕೆ ನೀಡಿರುತ್ತಾರೆ.

"ಮಾನ್ಯ ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ, ಮಂಡ್ಯ ರವರು ದಿನಾಂಕ:09-03-2015 ರಂದು ಸಹಿ ಮಾಡಿರುವ ಪತ್ರ ಸಂಖ್ಯೆ: ಇಎಲ್‌ಎನ್(2)ಸಿಆರ್/211/2014-15ರ ಪತ್ರದಲ್ಲಿ ನೀಡಿರುವ ಮಾಹಿತಿಯಂತೆ ಕ್ರಮವಹಿಸಬೇಕಾಗಿ ಕೋರುತ್ತೇನೆ.''ಎಂದು ಕೋರಿರುತ್ತಾರೆ. ದಿನಾಂಕ:09-03-2015 ಪತ್ರವು ಕೆಳಕಂಡಂತಿರುತ್ತದೆ.

"ನಾಗಮಂಗಲ ತಾಲ್ಲೂಕು ಕಬ್ಬಿನಕೆರೆ ಗ್ರಾಮವನ್ನು ಹಾಲಿಯಿರುವ ನೆಲ್ಲಿಗೆರೆ ಗ್ರಾ.ಪಂ.ಯಿಂದ ಬೇರ್ಪಡಿಸಿ ಹುಲಿಕೆರೆ ಗ್ರಾ.ಪಂ.ಗೆ ಸೇರ್ಪಡೆ ಮಾಡದೆ ನೆಲ್ಲಿಗೆರೆ ಗ್ರಾ.ಪಂ.ಯಲ್ಲಿಯೇ ಮುಂದುವರಿಸಲು, ಗೌಡರಹಳ್ಳಿ ಗ್ರಾಮವನ್ನು ಹಾಲಿಯಿರುವ ಮಾಹಿಗೋನಹಳ್ಳಿ ಗ್ರಾ.ಪಂ.ಯಿಂದ ಬೇರ್ಪಡಿಸಿ ಹುಲಿಕೆರೆ ಗ್ರಾ.ಪಂ.ಗೆ ಸೇರಿಸಲು ಮತ್ತು ಕರಡಹಳ್ಳಿ ಹಾಗೂ ಬುಡಬುಡಕೆ ಕಾಲೋನಿಯನ್ನು ಹಾಲಿಯಿರುವ ಅಂಚೆಚಿಟ್ಟನಹಳ್ಳಿ ಗ್ರಾ.ಪಂ.ಯಿಂದ ಕೈಬಿಟ್ಟು ಹುಲಿಕೆರೆ ಗ್ರಾ.ಪಂ.ಗೆ ಸೇರಿಸಲು ಕೋರಿ ತಮ್ಮ ಕಛೇರಿಗೆ ಸಲ್ಲಿಕೆಯಾಗಿರುವ ಆಕ್ಷೇಪಣೆಗಳನ್ನು ಇತ್ಯರ್ಥಪಡಿಸಲು ದಿನಾಂಕ:06-03-2015 ರಂದು ಮೇಲ್ಕಾಣಿ ಪ್ರಕರಣದ ವಿಚಾರಣೆಯನ್ನು ನಿಗಧಿಪಡಿಸಿರುವ ಮೇರೆಗೆ ಉಲ್ಲೇಖ (3) ರ ರೀತ್ಯಾ ತಹಸೀಲ್ದಾರ್, ನಾಗಮಂಗಲ ತಾಲ್ಲೂಕುರವರಿಂದ ವರದಿಯನ್ನು ಪಡೆಯಲಾಗಿದೆ."

"ಸದರಿಯವರ ವರದಿಯಂತೆ ಕಬ್ಬಿನಕೆರೆ ಗ್ರಾಮವು ನೆಲ್ಲಿಗೆರೆ ಗ್ರಾ.ಪಂ.ಯಿಂದ 2.5 ಕಿ.ಮೀ ದೂರದಲ್ಲಿದ್ದು, ಹೊಸದಾಗಿ ರಚಿಸಿರುವ ಹುಲಿಕೆರೆ ಗ್ರಾ.ಪಂ.ಗೆ 6 ಕಿ.ಮೀ ದೂರವಿರುವುದರಿಂದ ಕಬ್ಬಿನಕೆರೆ ಗ್ರಾಮವನ್ನು ನೆಲ್ಲಿಗೆರೆ ಗ್ರಾ.ಪಂ.ಯಲ್ಲಿಯೇ ಮುಂದುವರಿಸುವುದು ಸೂಕ್ತವೆಂದು ಹಾಗೂ ಗೌಡರಹಳ್ಳಿ ಗ್ರಾಮವು ಹಾಲಿಯಿರುವ ಮಾಯಿಗೋನಹಳ್ಳಿ ಗ್ರಾ.ಪಂ.ಯಿಂದ 6 ಕಿ.ಮೀ. ದೂರದಲ್ಲಿದ್ದು, ಹುಲಿಕೇರೆ ಗ್ರಾ.ಪಂ.ಗೆ 1.5ಕಿ.ಮೀ. ದೂರದಲ್ಲಿರುವುದರಿಂದ ಗೌಡರಹಳ್ಳಿ ಗ್ರಾಮವನ್ನು ಮಾಯಿಗೋನಹಳ್ಳಿ ಗ್ರಾ.ಪಂ.ಯಿಂದ ಬೇರ್ಪಡಿಸಿ ಹುಲಿಕೆರೆ ಗ್ರಾ.ಪಂ.ಗೆ ಸೇರ್ಪಡೆ ಮಾಡುವುದು ಸೂಕ್ತವೆಂದು ಮತ್ತು ಕರಡಹಳ್ಳಿ ಹಾಗೂ ಬುಡಬುಡಕೆ ಕಾಲೋನಿಯ ಅಂಚೆಚಿಟ್ಟನಹಳ್ಳಿ ಗ್ರಾ.ಪಂ. ಯಿಂದ 6 ಕಿ.ಮೀ. ದೂರದಲ್ಲಿದ್ದು, ಹುಲಿಕೆರೆ ಗ್ರಾ.ಪಂ.ಗೆ 3 ಕಿ.ಮೀ ದೂರದಲ್ಲಿರುವುದರಿಂದ ಕರಡಹಳ್ಳಿ ಹಾಗೂ ಬುಡಬುಡಕೆ ಕಾಲೋನಿಯನ್ನು ಅಂಚೆಚಿಟ್ಟನಹಳ್ಳಿ ಗ್ರಾ.ಪಂ.ಯಿಂದ ಬೇರ್ಪಡಿಸಿ ಹುಲಿಕೆರೆ ಗ್ರಾ.ಪಂ.ಗೆ ಸೇರ್ಪಡೆ ಮಾಡುವುದು ಸೂಕ್ತವೆಂದು ವರದಿಯನ್ನು ಸಲ್ಲಿಸಿರುತ್ತಾರೆ. ತಹಸೀಲ್ದಾರ್, ನಾಗಮಂಗಲ ತಾಲ್ಲೂಕು ರವರ ವರದಿಯನ್ನು ಈ ಕೂಡ ಲಗತ್ತಿಸಿ ತಮ್ಮ ಅವಗಾಹನೆಗೆ ಸಲ್ಲಿಸುತ್ತಾ, ಸಾರ್ವಜನಿಕ ಹಿತದೃಷ್ಟಿಯಿಂದ ಮೇಲ್ಕಂಡ ಕೋರಿಕೆಗಳನ್ನು ಪರಿಗಣಿಸಬಹುದಾಗಿದೆ ಎಂಬ ವಿಚಾರದಲ್ಲಿ ತಮ್ಮ ಸೂಕ್ತ ಆದೇಶಕ್ಕಾಗಿ ಸಲ್ಲಿಸಿದೆ."

ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ, ಮಂಡ್ಯರವರು ಪತ್ರ ಸಂಖ್ಯೆ: ಇಎಲ್‌ಎನ್(2)ಸಿಆರ್/211/2014-15ರ ದಿನಾಂಕ:09/03/2015 ರ ಪತ್ರದಲ್ಲಿ ಅಂಚೆಚಿಟ್ಟನಹಳ್ಳಿ ಗ್ರಾಮಪಂಚಾಯಿತಿಯಿಂದ ಕರಡಹಳ್ಳಿ ಮತ್ತು ಬುಡಬುಡಕೆ ಕಾಲೋನಿ (ದಾ) ಗ್ರಾಮಗಳನ್ನು ಬೇರ್ಪಡಿಸಿ, ಹುಲಿಕೆರೆ ಗ್ರಾಮ ಪಂಚಾಯಿತಿಗೆ ಸೇರ್ಪಡೆ ಮಾಡುವುದು ಸೂಕ್ತವೆಂದು ವರದಿಯನ್ನು ಸಲ್ಲಿಸಿರುವ ಮೇರೆಗೆ, ಸಾರ್ವಜನಿಕ ಹಿತದೃಷ್ಟಿಯಿಂದ ಮೇಲ್ಕಂಡ ಕೋರಿಕೆಗಳನ್ನು ಪರಿಗಣಿಸಬಹುದಾಗಿದೆ ಎಂದು ವರದಿ ಸಲ್ಲಿಸಿರುವುದರಿಂದ ಈ ಎಲ್ಲಾ ಅಂಶಗಳನ್ನು ಪರಿಶೀಲಿಸಿ ಕೆಳಕಂಡಂತೆ ಆದೇಶಿಸಲಾಗಿದೆ.

ಯಾ ಪ್ರತಿ ದೃಢೀಕರಿಸಿದೆ

ಆದೇಶ

ಸಂ:ಚುನಾವಣೆ ಸಿಆರ್/94(4)/2014-15

ದಿನಾಂಕ:10-03-2015

ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ, ಮಂಡ್ಯರವರ ಅಂತಿಮ ಅಧಿಸೂಚನೆ ಸಂಖ್ಯೆ: ಇಎಲ್‌ಎನ್(2) ಸಿಆರ್/192/2014-15 ದಿನಾಂಕ:04-02-2015ರಲ್ಲಿ ಹಾಗೂ ದಿನಾಂಕ:05-02-2015ರ ತಿದ್ದುಪಡಿ ಅಧಿಸೂಚನೆಯಂತೆ ಮಂಡ್ಯ ಜಿಲ್ಲೆ, ನಾಗಮಂಗಲ ತಾಲ್ಲೂಕಿನ ಅಂಚೆಚಿಟ್ಟನಹಳ್ಳಿ ಗ್ರಾಮ ಪಂಚಾಯತಿಗೆ ಅಂಚೆಚಿಟ್ಟನಹಳ್ಳಿ, ಮಜ್ಜನಕೊಪ್ಪಲು(ದಾ), ಬ್ಯೆರನಹಳ್ಳಿ, ಕರಡಹಳ್ಳಿ ಹಾಗೂ ಬುಡಬುಡಕೆ ಕಾಲೋನಿ(ದಾ) ಬೇಗಮಂಗಲ, ರಾಮದೇವನಹಳ್ಳಿ, ಅಂಚೆಬೂವನಹಳ್ಳಿ, ಚಿಕ್ಕಜಟಕ, ಗೊಲ್ಲರಹಟ್ಟಿ(ದಾ) ಕೃಷ್ಣಾಪುರ, ಕಾಚೇನಹಳ್ಳಿ, ತೊಳಲಿ, ಉಪ್ಪಾರಹಳ್ಳಿ, ಅರಸೇಗೌಡನಕೊಪ್ಪಲು (ದಾ),ಬಸವೇಶ್ವರನಗರ (ದಾ) ಚೌಡೇನಹಳ್ಳಿ ಗ್ರಾಮಗಳನ್ನು ಸೇರಿಸಿ, ಹೊರಡಿಸಿದ ಅಧಿಸೂಚನೆಯನ್ನು ಪರಿಷ್ಕರಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಜಿಲ್ಲಾಧಿಕಾರಿಗಳು ದಿ:04-02-2015 ಹಾಗೂ ದಿ:05-02-2015ರಲ್ಲಿ ಹೊರಡಿಸಿರುವ ಅಧಿಸೂಚನೆಯಂತೆ ರಚಿಸಿರುವ ಗ್ರಾಮ ಪಂಚಾಯತಿ			ಮೇಲ್ಮನವಿಯನ್ನು ಪರಿಗಣಿಸಿ ಜಿಲ್ಲಾಧಿಕಾರಿಗಳ ಅಧಿಸೂಚನೆಯನ್ನು ಮಾರ್ಪಡಿಸಿ ರಚಿಸಿರುವ ಗ್ರಾಮ ಪಂಚಾಯತಿ		
ಗ್ರಾಮ ಪಂಚಾಯಿತಿ ಹೆಸರು	ಗ್ರಾಮ ಪಂಚಾಯಿತಿ ಕೇಂದ್ರ ಸ್ಥಾನ	ಗ್ರಾಮಪಂಚಾಯಿತಿ ವ್ಯಾಪ್ತಿಗೆ ಸೇರಿರುವ ಗ್ರಾಮಗಳು	ಗ್ರಾಮ ಪಂಚಾಯಿತಿ ಹೆಸರು	ಗ್ರಾಮ ಪಂಚಾಯಿತಿ ಕೇಂದ್ರ ಸ್ಥಾನ	ಗ್ರಾಮಪಂಚಾಯಿತಿ ವ್ಯಾಪ್ತಿಗೆ ಸೇರಿರುವ ಗ್ರಾಮಗಳು
ಅಂಚೆ ಚಿಟ್ಟನಹಳ್ಳಿ	ಅಂಚೆ ಚಿಟ್ಟನಹಳ್ಳಿ	ಅಂಚೆಚಿಟ್ಟನಹಳ್ಳಿ, ಮಜ್ಜನಕೊಪ್ಪಲು (ದಾ), ಬ್ಯೆರನಹಳ್ಳಿ, ಕರಡಹಳ್ಳಿ, ಬುಡಬುಡಕೆ ಕಾಲೋನಿ (ದಾ) ಬೇಗಮಂಗಲ, ರಾಮದೇವನಹಳ್ಳಿ, ಅಂಚೆಬೂವನಹಳ್ಳಿ, ಚಿಕ್ಕಜಟಕ, ಗೊಲ್ಲರಹಟ್ಟಿ (ದಾ) ಕೃಷ್ಣಾಪುರ, ಕಾಚೇನಹಳ್ಳಿ, ತೊಳಲಿ, ಉಪ್ಪಾರಹಳ್ಳಿ, ಅರಸೇಗೌಡನಕೊಪ್ಪಲು (ದಾ), ಬಸವೇಶ್ವರನಗರ (ದಾ) ಚೌಡೇನಹಳ್ಳಿ	ಅಂಚೆ ಚಿಟ್ಟನಹಳ್ಳಿ	ಅಂಚೆ ಚಿಟ್ಟನಹಳ್ಳಿ	ಅಂಚೆಚಿಟ್ಟನಹಳ್ಳಿ, ಮಜ್ಜನಕೊಪ್ಪಲು (ದಾ), ಬ್ಯೆರನಹಳ್ಳಿ, ಬೇಗಮಂಗಲ, ರಾಮದೇವನಹಳ್ಳಿ, ಅಂಚೆಬೂವನಹಳ್ಳಿ, ಚಿಕ್ಕಜಟಕ, ಗೊಲ್ಲರಹಟ್ಟಿ (ದಾ), ಕೃಷ್ಣಾಪುರ, ಕಾಚೇನಹಳ್ಳಿ, ತೊಳಲಿ, ಉಪ್ಪಾರಹಳ್ಳಿ, ಅರಸೇಗೌಡನಕೊಪ್ಪಲು (ದಾ), ಬಸವೇಶ್ವರನಗರ (ದಾ), ಚೌಡೇನಹಳ್ಳಿ

ಛಾಯಾ ಪ್ರತಿ ದೃಢೀಕರಿಸಿದೆ

ಆಯುಕ್ತರ ಕಚೇರಿ
...ರು ವಿಭಾಗ, ಮೈಸೂರು

[illegible]	ಹುಲಿಕೆರೆ	ಹುಲಿಕೆರೆ, ಮುಳ್ಳಹಳ್ಳಿ, ಕೆಲಗೆರೆ, ದೊಡ್ಡೇಗೌಡನಕೊಪ್ಪಲು (ದಾ) ಕೆಲೆಗೆರೆ ಕಾವಲು(ಬೇ), ಕಬ್ಬೇನಹಳ್ಳಿ, ಅರೇಹಳ್ಳಿ, ದೇವೇಗೌಡನಕೊಪ್ಪಲು (ದಾ), ಹೊನ್ನುಡಿಕೆಹಳ್ಳಿ, ತ್ಯಾಪೇನಹಳ್ಳಿ, ಅಂಕುಶಾಪುರ, ಚೋಳೇನಹಳ್ಳಿ, ಚೋಳೇನಹಳ್ಳಿ ಕೊಪ್ಪಲು (ದಾ), ನರಗನಹಳ್ಳಿ, ಮಲ್ಲರಾಜಪುರ, ನೀಲಕಂಠನಹಳ್ಳಿ..	ಹುಲಿಕೆರೆ	ಹುಲಿಕೆರೆ	ಹುಲಿಕೆರೆ, ಮುಳ್ಳಹಳ್ಳಿ, ಕೆಲಗೆರೆ, ದೊಡ್ಡೇಗೌಡನಕೊಪ್ಪಲು (ದಾ) ಕೆಲೆಗೆರೆ ಕಾವಲು(ಬೇ), ಕಬ್ಬೇನಹಳ್ಳಿ, ಅರೇಹಳ್ಳಿ, ದೇವೇಗೌಡನಕೊಪ್ಪಲು (ದಾ) ಹೊನ್ನುಡಿಕೆಹಳ್ಳಿ, ತ್ಯಾಪೇನಹಳ್ಳಿ, ಅಂಕುಶಾಪುರ, ಚೋಳೇನಹಳ್ಳಿ, ಚೋಳೇನಹಳ್ಳಿ ಕೊಪ್ಪಲು (ದಾ), ನರಗನಹಳ್ಳಿ, ಮಲ್ಲರಾಜಪುರ, ನೀಲಕಂಠನಹಳ್ಳಿ, ಕೆರಡಹಳ್ಳಿ ಬುಡಬುಡಕೆ ಕಾಲೋನಿ(ದಾ)

ಈ ಆದೇಶವನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖನ ನೀಡಿ ಗಣಕೀಕರಿಸಿದ ಪ್ರತಿಯನ್ನು ಪರಿಶೀಲಿಸಿ, ದಿನಾಂಕ:10-03-2015 ರಂದು ಹೊರಡಿಸಲಾಗಿದೆ.

(ಎಸ್.ಎಸ್.ಪಟ್ಟಣಶೆಟ್ಟಿ)
ಪ್ರಾದೇಶಿಕ ಆಯುಕ್ತರು
ಮೈಸೂರು ವಿಭಾಗ, ಮೈಸೂರು

"ನಕಲು ಪ್ರತಿ ದೃಢೀಕರಿಸಿದೆ"

ಪ್ರಾದೇಶಿಕ ಆಯುಕ್ತರ ಕಚೇರಿ
ಮೈಸೂರು ವಿಭಾಗ, ಮೈಸೂರು

ಪ್ರಾದೇಶಿಕ ಆಯುಕ್ತರು, ಮೈಸೂರು ವಿಭಾಗ, ಮೈಸೂರುರವರ ನಡವಳಿ.

39

ವಿಷಯ:- ಗ್ರಾಮ ಪಂಚಾಯತಿ ಪುನರ್ ವಿಂಗಡಣಾ ಸಮಿತಿ ವರದಿ-2014 ಶಿಫಾರಸ್ಸು ಮಾಡಿದ ನೂತನ ಗ್ರಾಮ ಪಂಚಾಯತಿಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ, ಮಂಡ್ಯ ರವರು ದಿನಾಂಕ:04-02-2015ರಂದು ಹೊರಡಿಸಿದ ಅಂತಿಮ ಅಧಿಸೂಚನೆಗೆ ಸಂಬಂಧಿಸಿದಂತೆ ಶ್ರೀ ಜಿ.ಎಸ್.ನಾಗರಾಜು ಬಿನ್ ನಂಜುಂಡೇಗೌಡ, ಗೌಡರಹಳ್ಳಿ ಮತ್ತು ಗ್ರಾಮಸ್ಥರು, ಕಸಬಾ ಹೋಬಳಿ, ನಾಗಮಂಗಲ ತಾಲ್ಲೂಕು ಇವರು ಸಲ್ಲಿಸಿರುವ ಮೇಲ್ಮನವಿ ಕುರಿತು.

ಉಲ್ಲೇಖ:-1) ಸರ್ಕಾರದ ಪತ್ರ ಸಂಖ್ಯೆ: ಗ್ರಾಅಪ 10 ಗ್ರಾಪಂಅ 2015 ದಿನಾಂಕ:09-01-2015.

2) ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ, ಮಂಡ್ಯ ರವರ ಅಂತಿಮ ಅಧಿಸೂಚನೆ ಸಂಖ್ಯೆ: ಇಎಲ್‌ಎನ್ (2) ಸಿಆರ್ /192/2014-15 ದಿನಾಂಕ:04-02-2015.

3) ಶ್ರೀ ಜಿ.ಎಸ್.ನಾಗರಾಜು ಬಿನ್ ನಂಜುಂಡೇಗೌಡ, ಗೌಡರಹಳ್ಳಿ ಮತ್ತು ಗ್ರಾಮಸ್ಥರು, ಕಸಬಾ ಹೋಬಳಿ, ನಾಗಮಂಗಲ ತಾಲ್ಲೂಕು ಇವರು ಸಲ್ಲಿಸಿರುವ ಮೇಲ್ಮನವಿ ದಿನಾಂಕ:26-02-2015 (ಈ ಕಛೇರಿಗೆ ಸ್ವೀಕೃತಗೊಂಡ ದಿನಾಂಕ:26-02-2015).

4) ಈ ಕಛೇರಿಯ ತಿಳುವಳಿಕೆ ಪತ್ರ ಸಂಖ್ಯೆ: ಚುನಾವಣೆ ಸಿಆರ್ 94/2014-15 ದಿನಾಂಕ:02-03-2015.

*****

ಪ್ರಸ್ತಾವನೆ:-

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರಂತೆ ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆರವರಿಗೆ ಗ್ರಾಮ ಪಂಚಾಯತಿಗಳ ಪುನರ್ ವಿಂಗಡಣೆ ಮತ್ತು ಹೊಸ ಗ್ರಾಮ ಪಂಚಾಯತಿಗಳ ರಚನೆ ಕುರಿತು ಅಧಿಸೂಚನೆ ಹೊರಡಿಸುವ ಬಗ್ಗೆ ಬರೆದಿರುವ ಪತ್ರದ ಕಂಡಿಕೆ (4)ರಲ್ಲಿ ಜಿಲ್ಲಾಧಿಕಾರಿಗಳು ಪ್ರಕಟಿಸುವ ಅಂತಿಮ ಅಧಿಸೂಚನೆಯಿಂದ ಬಾಧಿತರಾದ ವ್ಯಕ್ತಿಗಳಿಂದ ಮೇಲ್ಮನವಿಗಳನ್ನು ಸಂಬಂಧಿಸಿ ಪ್ರಾದೇಶಿಕ ಆಯುಕ್ತರಿಗೆ ಸಲ್ಲಿಸಲು ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 4(3)ರಡಿ ಅವಕಾಶ ಕಲ್ಪಿಸಲಾಗಿದೆ. ಸದರಿ ಸರ್ಕಾರದ ಪತ್ರದೊಂದಿಗೆ ಲಗತ್ತಿಸಿರುವ ವೇಳಾಪಟ್ಟಿಯಲ್ಲಿ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 4(3)ರನ್ವಯ ಜಿಲ್ಲಾಧಿಕಾರಿಗಳ ಅಧಿಸೂಚನೆಯಿಂದ ಬಾಧಿತರಾದ ಸಾರ್ವಜನಿಕರು ಸಂಬಂಧಿಸಿದ ಪ್ರಾದೇಶಿಕ ಆಯುಕ್ತರಿಗೆ ಮೇಲ್ಮನವಿ ಸಲ್ಲಿಸಲು ದಿನಾಂಕ:05-02-2015 ರಿಂದ 30 ದಿನಗಳ ಅಂದರೆ ದಿನಾಂಕ:05-03-2015ರವರೆಗೆ ಕಾಲಾವಕಾಶ ನೀಡಲಾಗಿರುತ್ತದೆ. ನಂತರ ಸಂಬಂಧಿಸಿದ ಪ್ರಾದೇಶಿಕ ಆಯುಕ್ತರುಗಳು ಮೇಲ್ಮನವಿಯನ್ನು ಪರಿಶೀಲಿಸಿ, ದಿನಾಂಕ:10-03-2015ಕ್ಕೆ ವಿಲೇವಾರಿಗೊಳಿಸಲು ತಿಳಿಸಲಾಗಿರುತ್ತದೆ.

ಛಾಯಾ ಪ್ರತಿ ದೃಢೀಕರಿಸಿದೆ

---2)

ಪ್ರಾದೇಶಿಕ ಆಯುಕ್ತರ ಪರವಾಗಿ
ಮೈಸೂರು ವಿಭಾಗ, ಮೈಸೂರು

ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ, ಮಂಡ್ಯ ರವರು ದಿನಾಂಕ:19-01-2015ರಂದು ಕರಡು ಅಧಿಸೂಚನೆಯನ್ನು ಪ್ರಕಟಿಸಿ, ಸಾರ್ವಜನಿಕರ ಮಾಹಿತಿಗಾಗಿ, ಸಲಹೆ ಹಾಗೂ ಆಕ್ಷೇಪಣೆಗಳನ್ನು ಪಡೆಯಲು ಕನಿಷ್ಠ 10 ದಿನಗಳ ಕಾಲಾವಕಾಶಗಳನ್ನು ಕಲ್ಪಿಸಿ ಸಾರ್ವಜನಿಕರಿಂದ ಸ್ವೀಕರಿಸುವ ಆಕ್ಷೇಪಣೆ ಮತ್ತು ಸಲಹೆಗಳನ್ನು ಪರಿಶೀಲಿಸಿ ಅಂತಿಮ ಅಧಿಸೂಚನೆಯನ್ನು ದಿನಾಂಕ:04-02-2015ರಂದು ಕರ್ನಾಟಕ ರಾಜ್ಯ ಗೆಜೆಟ್ ಪತ್ರಿಕೆಯಲ್ಲಿ ಪ್ರಕಟಿಸುವಂತೆ ನಿರ್ದೇಶನ ನೀಡಲಾಗಿರುತ್ತದೆ.

ಸರ್ಕಾರದ ನಿರ್ದೇಶನದಂತೆ, ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ, ಮಂಡ್ಯ ರವರು ಉಲ್ಲೇಖ(2)ರಲ್ಲಿ ಅಂತಿಮ ಅಧಿಸೂಚನೆ ಹೊರಡಿಸಿರುತ್ತಾರೆ.

ಜಿಲ್ಲಾಧಿಕಾರಿಗಳ ದಿನಾಂಕ:04-02-2015ರ ಅಂತಿಮ ಅಧಿಸೂಚನೆಗೆ ಸಂಬಂಧಪಟ್ಟಂತೆ ಉಲ್ಲೇಖ(3)ರಲ್ಲಿ ಶ್ರೀ ಜಿ.ಎಸ್.ನಾಗರಾಜು ಬಿನ್ ನಂಜುಂಡೇಗೌಡ, ಗೌಡರಹಳ್ಳಿ ಮತ್ತು ಗ್ರಾಮಸ್ಥರು, ಕಸಬಾ ಹೋಬಳಿ, ನಾಗಮಂಗಲ ತಾಲ್ಲೂಕು ಇವರು ದಿನಾಂಕ:26/02/2015ರಂದು ಮೇಲ್ಮನವಿ ಸಲ್ಲಿಸಿ, ಮೇಲ್ಮನವಿಯಲ್ಲಿ ಹೆಚ್ಚುವರಿ ಪುನರ್ ವಿಂಗಡಣಾ ವ್ಯವಸ್ಥೆಯಲ್ಲಿ ಗೌಡರಹಳ್ಳಿ ಗ್ರಾಮವನ್ನು ಮಾಯಿಗೋನಹಳ್ಳಿ ಗ್ರಾಮಪಂಚಾಯಿತಿಯಿಂದ ಹಿಂಪಡೆದು ಹುಲಿಕೆರೆ ಗ್ರಾಮಪಂಚಾಯಿತಿಯಲ್ಲಿ ಮುಂದುವರೆಸುವಂತೆ ಕೋರಿರುತ್ತಾರೆ.

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 4(3)ರಂತೆ ಉಲ್ಲೇಖ(4)ರಲ್ಲಿ ಈ ಕಛೇರಿಯಿಂದ ಮೇಲ್ಮನವಿದಾರರಾದ ಶ್ರೀ ಜಿ.ಎಸ್.ನಾಗರಾಜು ಬಿನ್ ನಂಜುಂಡೇಗೌಡ, ಗೌಡರಹಳ್ಳಿ ಕಸಬಾ ಹೋಬಳಿ, ನಾಗಮಂಗಲ ತಾಲ್ಲೂಕು ರವರಿಗೆ ದಿನಾಂಕ:06-03-2015ರಂದು ಮೇಲ್ಮನವಿ ಕುರಿತು ವಿಚಾರಣೆಗೆ ಹಾಜರಾಗುವಂತೆ ತಿಳುವಳಿಕೆ ಪತ್ರ ನೀಡಲಾಗಿತ್ತು.

ಅದರಂತೆ ಮೇಲ್ಮನವಿದಾರರು ದಿನಾಂಕ:06-03-2015ರಂದು ವಿಚಾರಣೆಗೆ ಹಾಜರಾಗಿ ಕೆಳಕಂಡಂತೆ ಹೇಳಿಕೆ ನೀಡಿರುತ್ತಾರೆ.

" ಈಗಾಗಲೇ ನಾನು ಮಾನ್ಯ ಪ್ರಾದೇಶಿಕ ಆಯುಕ್ತರಿಗೆ ದಿನಾಂಕ:26-02-2015ರಂದು ಲಿಖಿತವಾಗಿ ಸಲ್ಲಿಸಿರುವ ಮೇಲ್ಮನವಿಯಲ್ಲಿನ ವಿಷಯವನ್ನೆ ನನ್ನ ಹೇಳಿಕೆಯೆಂದು ಪರಿಗಣಿಸಬೇಕೆಂದು ಕೋರುತ್ತೇನೆ."

ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ, ಮಂಡ್ಯ ರವರ ಪರವಾಗಿ ಶ್ರೀ. ದಿನೇಶ್‌ಚಂದ್ರ, ತಹಶೀಲ್ದಾರ್ (ಚುನಾವಣೆ), ಜಿಲ್ಲಾಧಿಕಾರಿಗಳ ಕಛೇರಿ, ಮಂಡ್ಯ ಜಿಲ್ಲೆ, ಮಂಡ್ಯ ರವರು ದಿನಾಂಕ: 06-03-2015 ರಂದು ವಿಚಾರಣೆಗೆ ಹಾಜರಾಗಿ ಪ್ರಕರಣಕ್ಕೆ ಸಂಬಂಧಿಸಿದಂತೆ, ಮಾಹಿತಿಯನ್ನು ನೀಡಲು ಕಾಲಾವಕಾಶವನ್ನು ಕೋರಿದ್ದರ ಮೇರೆಗೆ ಪ್ರಕರಣವನ್ನು ದಿನಾಂಕ:09-03-2015 ಕ್ಕೆ ಮುಂದೂಡಲಾಗಿತ್ತು.

...ಯ ಪ್ರತಿ ದೃಢೀಕರಿಸಿದೆ

...ಆಯುಕ್ತರ ಪರವಾಗಿ
...ವಿಭಾಗ ಮೈಸೂರು

--3)

38

ದಿನಾಂಕ:09-03-2015 ರಂದು ಪ್ರಕರಣವನ್ನು ಕೂಗಿಸಲಾಯಿತು. ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ, ಮಂಡ್ಯ ರವರ ಪರವಾಗಿ ಶ್ರೀ ದಿನೇಶ್‌ಚಂದ್ರ, ತಹಶೀಲ್ದಾರ್ (ಚುನಾವಣೆ), ಜಿಲ್ಲಾಧಿಕಾರಿಗಳ ಕಛೇರಿ, ಮಂಡ್ಯ ಜಿಲ್ಲೆ, ಮಂಡ್ಯ ಇವರು ಹಾಜರಿದ್ದು, ಪ್ರಕರಣಕ್ಕೆ ಸಂಬಂಧಿಸಿದಂತೆ, ಈ ಕೆಳಕಂಡಂತೆ ಹೇಳಿಕೆ ನೀಡಿರುತ್ತಾರೆ.

"ಮಾನ್ಯ ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ, ಮಂಡ್ಯ ರವರು ದಿನಾಂಕ:09-03-2015 ರಂದು ಸಹಿ ಮಾಡಿರುವ ಪತ್ರ ಸಂಖ್ಯೆ: ಇಎಲ್‌ಎಸ್(2)ಸಿಆರ್/211/2014-15ರ ಪತ್ರದಲ್ಲಿ ನೀಡಿರುವ ಮಾಹಿತಿಯಂತೆ ಕ್ರಮವಹಿಸಬೇಕಾಗಿ ಕೋರುತ್ತೇನೆ.''ಎಂದು ಕೋರಿರುತ್ತಾರೆ. ದಿನಾಂಕ:09-03-2015 ಪತ್ರವು ಕೆಳಕಂಡಂತಿರುತ್ತದೆ.

"ನಾಗಮಂಗಲ ತಾಲ್ಲೂಕು ಕಬ್ಬಿನಕೆರೆ ಗ್ರಾಮವನ್ನು ಹಾಲಿಯಿರುವ ಬೆಲ್ಲಿಗೆರೆ ಗ್ರಾ.ಪಂ.ಯಿಂದ ಬೇರ್ಪಡಿಸಿ ಹುಲಿಕೆರೆ ಗ್ರಾ.ಪಂ.ಗೆ ಸೇರ್ಪಡೆ ಮಾಡದೆ ಬೆಲ್ಲಿಗೆರೆ ಗ್ರಾ.ಪಂ.ಯಲ್ಲಿಯೇ ಮುಂದುವರಿಸಲು, ಗೌಡರಹಳ್ಳಿ ಗ್ರಾಮವನ್ನು ಹಾಲಿಯಿರುವ ಮಾಯಿಗೋನಹಳ್ಳಿ ಗ್ರಾ.ಪಂ.ಯಿಂದ ಬೇರ್ಪಡಿಸಿ ಹುಲಿಕೆರೆ ಗ್ರಾ.ಪಂ.ಗೆ ಸೇರಿಸಲು ಮತ್ತು ಕರಡಹಳ್ಳಿ ಹಾಗೂ ಬುಡಬುಡಕೆ ಕಾಲೋನಿಯನ್ನು ಹಾಲಿಯಿರುವ ಅಂಚೆಚಿಟ್ಟನಹಳ್ಳಿ ಗ್ರಾ.ಪಂ.ಯಿಂದ ಕೈಬಿಟ್ಟು ಹುಲಿಕೆರೆ ಗ್ರಾ.ಪಂ.ಗೆ ಸೇರಿಸಲು ಕೋರಿ ತಮ್ಮ ಕಛೇರಿಗೆ ಸಲ್ಲಿಕೆಯಾಗಿರುವ ಆಕ್ಷೇಪಣೆಗಳನ್ನು ಇತ್ಯರ್ಥಪಡಿಸಲು ದಿನಾಂಕ:06-03-2015 ರಂದು ಮೇಲ್ಕನವಿ ಪ್ರಕರಣದ ವಿಚಾರಣೆಯನ್ನು ನಿಗದಿಪಡಿಸಿರುವ ಮೇರೆಗೆ ಉಲ್ಲೇಖ (3) ರ ರೀತ್ಯಾ ತಹಸೀಲ್ದಾರ್, ನಾಗಮಂಗಲ ತಾಲ್ಲೂಕುರವರಿಂದ ವರದಿಯನ್ನು ಪಡೆಯಲಾಗಿದೆ."

"ಸದರಿಯವರ ವರದಿಯಂತೆ ಕಬ್ಬಿನಕೆರೆ ಗ್ರಾಮವು ಬೆಲ್ಲಿಗೆರೆ ಗ್ರಾ.ಪಂ.ಯಿಂದ 2.5 ಕಿ.ಮೀ ದೂರದಲ್ಲಿದ್ದು, ಹೊಸದಾಗಿ ರಚಿಸಿರುವ ಹುಲಿಕೆರೆ ಗ್ರಾ.ಪಂ.ಗೆ 6 ಕಿ.ಮೀ ದೂರವಿರುವುದರಿಂದ ಕಬ್ಬಿನಕೆರೆ ಗ್ರಾಮವನ್ನು ಬೆಲ್ಲಿಗೆರೆ ಗ್ರಾ.ಪಂ.ಯಲ್ಲಿಯೇ ಮುಂದುವರಿಸುವುದು ಸೂಕ್ತವೆಂದು ಹಾಗೂ ಗೌಡರಹಳ್ಳಿ ಗ್ರಾಮವು ಹಾಲಿಯಿರುವ ಮಾಯಿಗೋನಹಳ್ಳಿ ಗ್ರಾ.ಪಂ.ಯಿಂದ 6 ಕಿ.ಮೀ. ದೂರದಲ್ಲಿದ್ದು, ಹುಲಿಕೇರೆ ಗ್ರಾ.ಪಂ.ಗೆ 1.5 ಕಿ.ಮೀ. ದೂರದಲ್ಲಿರುವುದರಿಂದ ಗೌಡರಹಳ್ಳಿ ಗ್ರಾಮವನ್ನು ಮಾಯಿಗೋನಹಳ್ಳಿ ಗ್ರಾ.ಪಂ.ಯಿಂದ ಬೇರ್ಪಡಿಸಿ ಹುಲಿಕೆರೆ ಗ್ರಾ.ಪಂ.ಗೆ ಸೇರ್ಪಡೆ ಮಾಡುವುದು ಸೂಕ್ತವೆಂದು ಮತ್ತು ಕರಡಹಳ್ಳಿ ಹಾಗೂ ಬುಡಬುಡಕೆ ಕಾಲೋನಿಯ ಅಂಚೆಚಿಟ್ಟನಹಳ್ಳಿ ಗ್ರಾ.ಪಂ.ಯಿಂದ 6 ಕಿ.ಮೀ. ದೂರದಲ್ಲಿದ್ದು, ಹುಲಿಕೆರೆ ಗ್ರಾ.ಪಂ.ಗೆ 3 ಕಿ.ಮೀ ದೂರದಲ್ಲಿರುವುದರಿಂದ ಕರಡಹಳ್ಳಿ ಹಾಗೂ ಬುಡಬುಡಕೆ ಕಾಲೋನಿಯನ್ನು ಅಂಚೆಚಿಟ್ಟನಹಳ್ಳಿ ಗ್ರಾ.ಪಂ.ಯಿಂದ ಬೇರ್ಪಡಿಸಿ ಹುಲಿಕೆರೆ ಗ್ರಾ.ಪಂ.ಗೆ ಸೇರ್ಪಡೆ ಮಾಡುವುದು ಸೂಕ್ತವೆಂದು ವರದಿಯನ್ನು ಸಲ್ಲಿಸಿರುತ್ತಾರೆ. ತಹಸೀಲ್ದಾರ್, ನಾಗಮಂಗಲ ತಾಲ್ಲೂಕು ರವರ ವರದಿಯನ್ನು ಈ ಕೂಡ ಲಗತ್ತಿಸಿ ತಮ್ಮ ಅವಗಾಹನೆಗೆ ಸಲ್ಲಿಸುತ್ತಾ, ಸಾರ್ವಜನಿಕ ಹಿತದೃಷ್ಟಿಯಿಂದ ಮೇಲ್ಕಂಡ ಕೋರಿಕೆಗಳನ್ನು ಪರಿಗಣಿಸಬಹುದಾಗಿದೆ ಎಂಬ ವಿಚಾರದಲ್ಲಿ ತಮ್ಮ ಸೂಕ್ತ ಆದೇಶಕ್ಕಾಗಿ ಸಲ್ಲಿಸಿದೆ."

"ಛಾಯಾ ಪ್ರತಿ ದೃಢೀಕರಿಸಿದೆ"

---4)

ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ, ಮಂಡ್ಯರವರು ಪತ್ರ ಸಂಖ್ಯೆ: ಇಎಲ್‌ಎಸ್(2)ಸಿಆರ್/211/2014–15ರ ದಿನಾಂಕ:09/03/2015 ರ ಪತ್ರದಲ್ಲಿ ಮಾಯಿಗೋನಹಳ್ಳಿ ಗ್ರಾಮಪಂಚಾಯಿತಿಯಿಂದ ಗೌಡರಹಳ್ಳಿ ಗ್ರಾಮವನ್ನು ಬೇರ್ಪಡಿಸಿ, ಹುಲಿಕೆರೆ ಗ್ರಾಮ ಪಂಚಾಯಿತಿಗೆ ಸೇರ್ಪಡೆ ಮಾಡುವುದು ಸೂಕ್ತವೆಂದು ವರದಿಯನ್ನು ಸಲ್ಲಿಸಿರುವ ಮೇರೆಗೆ, ಸಾರ್ವಜನಿಕ ಹಿತದೃಷ್ಟಿಯಿಂದ ಮೇಲ್ಕಂಡ ಕೋರಿಕೆಗಳನ್ನು ಪರಿಗಣಿಸಬಹುದಾಗಿದೆ ಎಂದು ವರದಿ ಸಲ್ಲಿಸಿರುವುದರಿಂದ ಈ ಎಲ್ಲಾ ಅಂಶಗಳನ್ನು ಪರಿಶೀಲಿಸಿ ಕೆಳಕಂಡಂತೆ ಆದೇಶಿಸಲಾಗಿದೆ.

ಆದೇಶ

ಸಂ:ಚುನಾವಣೆ ಸಿಆರ್/94(3):2014–15 ದಿನಾಂಕ:10–03–2015

ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ, ಮಂಡ್ಯರವರ ಅಂತಿಮ ಅಧಿಸೂಚನೆ ಸಂಖ್ಯೆ: ಇಎಲ್‌ಎಸ್(2)ಸಿಆರ್/192/2014–15 ದಿನಾಂಕ:04–02–2015ರಲ್ಲಿ ಹಾಗೂ ದಿನಾಂಕ:05–02–2015ರ ತಿದ್ದುಪಡಿ ಅಧಿಸೂಚನೆಯಂತೆ ಮಂಡ್ಯ ಜಿಲ್ಲೆ, ನಾಗಮಂಗಲ ತಾಲ್ಲೂಕಿನ ಮಾಯಿಗೋನಹಳ್ಳಿ ಗ್ರಾಮ ಪಂಚಾಯಿತಿಗೆ ಮಾಯಿಗೋನಹಳ್ಳಿ, ಗಂಗರಹಳ್ಳಿ, ನರಗಲು, ಶಿವನಹಳ್ಳಿ, ಹೂವಿನಹಳ್ಳಿ, ಪಿ. ನೇರಳಕೆರೆ, ಸಿಂಗಾರಮ್ಮನಕೊಪ್ಪಲು(ದಾ), ಲಾಯದಕೊಪ್ಪಲು (ದಾ) ಹಾಳಪ್ಪನ ಕೊಪ್ಪಲು (ದಾ), ಕಡೇನಹಳ್ಳಿ (ದಾ), ಪಿ.ಮಲ್ಲೇನಹಳ್ಳಿ, ಪಡುವಲಪಟ್ಟಣ, ಬ್ಯಾಟರಾಯನಕೊಪ್ಪಲು(ದಾ) ಗ್ರಾಮಗಳನ್ನು ಸೇರಿಸಿ ಗ್ರಾಮ ಪಂಚಾಯಿತಿಯನ್ನಾಗಿ ರಚಿಸಿ ಹೊರಡಿಸಿದ ಅಧಿಸೂಚನೆಯನ್ನು ಪರಿಷ್ಕರಿಸಿ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 4(3)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

ಜಿಲ್ಲಾಧಿಕಾರಿಗಳು ದಿ:04–02–2015 ಹಾಗೂ ದಿ:05–02–2015ರಲ್ಲಿ ಹೊರಡಿಸಿರುವ ಅಧಿಸೂಚನೆಯಂತೆ ರಚಿಸಿರುವ ಗ್ರಾಮ ಪಂಚಾಯತಿ			ಮೇಲ್ಮನವಿಯನ್ನು ಪರಿಗಣಿಸಿ ಜಿಲ್ಲಾಧಿಕಾರಿಗಳ ಅಧಿಸೂಚನೆಯನ್ನು ಮಾರ್ಪಡಿಸಿ, ರಚಿಸಿರುವ ಗ್ರಾಮ ಪಂಚಾಯತಿ		
ಗ್ರಾಮ ಪಂಚಾಯಿತಿ ಹೆಸರು	ಗ್ರಾಮ ಪಂಚಾಯಿತಿ ಕೇಂದ್ರ ಸ್ಥಾನ	ಗ್ರಾಮಪಂಚಾಯಿತಿ ವ್ಯಾಪ್ತಿಗೆ ಸೇರಿರುವ ಗ್ರಾಮಗಳು	ಗ್ರಾಮ ಪಂಚಾಯಿತಿ ಹೆಸರು	ಗ್ರಾಮ ಪಂಚಾಯಿತಿ ಕೇಂದ್ರ ಸ್ಥಾನ	ಗ್ರಾಮಪಂಚಾಯಿತಿ ವ್ಯಾಪ್ತಿಗೆ ಸೇರಿರುವ ಗ್ರಾಮಗಳು
ಮಾಯಿ ಗೋನಹಳ್ಳಿ	ಮಾಯಿ ಗೋನಹಳ್ಳಿ	ಮಾಯಿಗೋನಹಳ್ಳಿ ಗಂಗರಹಳ್ಳಿ ಗೌಡರಹಳ್ಳಿ ನರಗಲು, ಶಿವನಹಳ್ಳಿ ಹೂವಿನಹಳ್ಳಿ, ಪಿ. ನೇರಳಕೆರೆ, ಸಿಂಗಾರಮ್ಮನಕೊಪ್ಪಲು (ದಾ), ಲಾಯದಕೊಪ್ಪಲು (ದಾ) ಹಾಳಪ್ಪನ ಕೊಪ್ಪಲು (ದಾ), ಕಡೇನಹಳ್ಳಿ (ದಾ), ಪಿ. ಮಲ್ಲೇನಹಳ್ಳಿ, ಪಡುವಲಪಟ್ಟಣ, ಬ್ಯಾಟರಾಯನಕೊಪ್ಪಲು (ದಾ)	ಮಾಯಿ ಗೋನಹಳ್ಳಿ	ಮಾಯಿ ಗೋನಹಳ್ಳಿ	ಮಾಯಿಗೋನಹಳ್ಳಿ ಗಂಗರಹಳ್ಳಿ ನರಗಲು, ಶಿವನಹಳ್ಳಿ, ಹೂವಿನಹಳ್ಳಿ, ಪಿ. ನೇರಳಕೆರೆ, ಸಿಂಗಾರಮ್ಮನಕೊಪ್ಪಲು (ದಾ), ಲಾಯದಕೊಪ್ಪಲು (ದಾ) ಹಾಳಪ್ಪನ ಕೊಪ್ಪಲು (ದಾ), ಕಡೇನಹಳ್ಳಿ (ದಾ), ಪಿ. ಮಲ್ಲೇನಹಳ್ಳಿ, ಪಡುವಲಪಟ್ಟಣ, ಬ್ಯಾಟರಾಯನಕೊಪ್ಪಲು (ದಾ)

ಪ್ರತಿ ದೃಢೀಕರಿಸಿದೆ

...ಕ್ತರ ಪರವಾಗಿ
..., ಮೈಸೂರು

ಹುಲಿಕೆರೆ	ಹುಲಿಕೆರೆ	ಹುಲಿಕೆರೆ ಮೆಳ್ಳಹಳ್ಳಿ, ಕೆಲಗೆರೆ, ದೊಡ್ಡೇಗೌಡನಕೊಪ್ಪಲು (ದಾ) ಕೆಲಗೆರೆ ಕಾವಲು(ಬೆ) ಕಪ್ಪೇನಹಳ್ಳಿ ಅರೇಹಳ್ಳಿ ದೇವೇಗೌಡನಕೊಪ್ಪಲು(ದಾ) ಹೊಮ್ಮಡಿಕೆಹಳ್ಳಿ ತ್ಯಾಪೇನಹಳ್ಳಿ ಅಂಕುಶಪುರ ಚೋಳೇನಹಳ್ಳಿ ಚೋಳೇನಹಳ್ಳಿ ಕೊಪ್ಪಲು(ದಾ) ನರಗನಹಳ್ಳಿ ಮಲ್ಲರಾಜಪುರ ನೀಲಕಂಠನಹಳ್ಳಿ ಕಬ್ಬಿನಕೆರೆ	ಹುಲಿಕೆರೆ	ಹುಲಿಕೆರೆ	ಹುಲಿಕೆರೆ ಮೆಳ್ಳಹಳ್ಳಿ ಕೆಲಗೆರೆ, ದೊಡ್ಡೇಗೌಡನಕೊಪ್ಪಲು (ದಾ ಕೆಲಗೆರೆ ಕಾವಲು(ಬೆ) ಕಪ್ಪೇನಹಳ್ಳಿ ಅರೇಹಳ್ಳಿ ದೇವೇಗೌಡನಕೊಪ್ಪಲು(ದಾ) ಹೊಮ್ಮಡಿಕೆಹಳ್ಳಿ ತ್ಯಾಪೇನಹಳ್ಳಿ ಅಂಕುಶಪುರ ಚೋಳೇನಹಳ್ಳಿ ಚೋಳೇನಹಳ್ಳಿ ಕೊಪ್ಪಲು(ನರಗನಹಳ್ಳಿ ಮಲ್ಲರಾಜಪುರ ನೀಲಕಂಠನಹಳ್ಳಿ ಗೌಡರಹಳ್ಳಿ

ಈ ಆದೇಶವನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖನ ನೀಡಿ ಗಣಕೀಕರಿಸಿದ ಪ್ರತಿಯನ ಪರಿಶೀಲಿಸಿ, ದಿನಾಂಕ:10-03-2015 ರಂದು ಹೊರಡಿಸಲಾಗಿದೆ.

"ಛಾಯಾ ಪ್ರತಿ ದೃಢೀಕರಿಸಿದೆ"

(ಎಸ್.ಎಸ್.ಪಟ್ಟಣಶೆಟ್ಟಿ)
ಪ್ರಾದೇಶಿಕ ಆಯುಕ್ತರು
ಮೈಸೂರು ವಿಭಾಗ, ಮೈಸೂರು

ಪ್ರಾದೇಶಿಕ ಆಯುಕ್ತರ [illegible]
[illegible] ವಿಭಾಗ, ಮೈಸೂರು

ವಿಧಾನ ಪರಿಷತ್ತಿನ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:735 ಕ್ಕೆ ಅನುಬಂಧ-3

ಹುಲಿಕೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕರಡಹಳ್ಳಿ ಮತ್ತು ಗೌಡರಹಳ್ಳಿ ಗ್ರಾಮಗಳಿಗೆ ವಿವಿಧ ಯೋಜನೆಗಳಡಿ ಕಳೆದ 5 ವರ್ಷಗಳಿಂದ ಕೈಗೊಂಡಿರುವ ಕಾಮಗಾರಿಗಳ ವಿವರ

ಕ್ರ.ಸಂ	ಯೋಜನೆ	ಸಾಲು	ಕಾಮಗಾರಿಗಳ ವಿವರ	ಅಂದಾಜು ಮೊತ್ತ
1	14ನೇ ಹಣಕಾಸು ಯೋಜನೆ	2016-17	ಗೌಡರಹಳ್ಳಿ ಗ್ರಾಮದ ದೇವಸ್ಥಾನದ ಮುಂಭಾಗ ರಸ್ತೆ ಅಭಿವೃದ್ಧಿ ಕಾಮಗಾರಿ	60000
2	14ನೇ ಹಣಕಾಸು ಯೋಜನೆ	2016-17	ಕರಡಹಳ್ಳಿ ಗ್ರಾಮದ ಪುಟ್ಟಣ್ಣನ ಮನೆಯಿಂದ ಮುದ್ದಣ್ಣನ ಮನೆಯ ತನಕ ಬಾಕ್ಸ್ ಚರಂಡಿ ಕಾಮಗಾರಿ	60000
3	14ನೇ ಹಣಕಾಸು ಯೋಜನೆ	2016-17	ಗೌಡರಹಳ್ಳಿ ಗ್ರಾಮದ ಗೆಜ್ಜೆರಾಮಣ್ಣನ ಮನೆಯಿಂದ ನಂಜೇಗೌಡನ ಮನೆವರೆಗೆ ಬಾಕ್ಸ ಚರಂಡಿ ಕಾಮಗಾರಿ	60000
4	14ನೇ ಹಣಕಾಸು ಯೋಜನೆ	2016-17	ಗೌಡರಹಳ್ಳಿ ಗ್ರಾಮದಲ್ಲಿ ಕುಡಿಯುವ ನೀರಿನ ತೊಂಬೆ ಮತ್ತು ಪ್ಲಾಟ್ ಫಾರಂ ದುರಸ್ತಿ ಕಾಮಗಾರಿ	25000
5	14ನೇ ಹಣಕಾಸು ಯೋಜನೆ	2017-18	ಗೌಡರಹಳ್ಳಿ ಗ್ರಾಮದ ಜಿ.ಎಂ ದಿವಾಕರ ಬಿನ್ ಮೂರ್ತಿರವರಿಗೆ ಕುರಿ ಸಾಕಣೆಕೆಗೆ ಸಹಾಯಧನ	3100
6	14ನೇ ಹಣಕಾಸು ಯೋಜನೆ	2018-19	ಕರಡಹಳ್ಳಿ ಗ್ರಾಮದ ಕುಮಾರನ ಮನೆಮುಂದೆ ತೊಂಬೆ ದುರಸ್ತಿ ಕಾಮಗಾರಿ	39860
7	14ನೇ ಹಣಕಾಸು ಯೋಜನೆ	2018-19	ಗೌಡರಹಳ್ಳಿ ಗ್ರಾಮದ ನಾರಾಯಣಗೌಡ ಬಿನ್ ಮುದ್ದೇಗೌಡರವರರಿಗೆ ಸೋಲಾರ್ ಹೋಮ್ ಲೈಟ್ ಕಿಟ್ ವಿತರಣೆ	8541
8	14ನೇ ಹಣಕಾಸು ಯೋಜನೆ	2018-19	ಗೌಡರಹಳ್ಳಿ ಗ್ರಾಮದ ಪ.ಜಾತಿ ಕಾಲೋನಿಯ ಪುಟ್ಟರಾಜು ಮನೆಯಿಂದ ವಿಷಕಂಠನವರ ಮನೆವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿ	89204
9	14ನೇ ಹಣಕಾಸು ಯೋಜನೆ	2018-20	ಗೌಡರಹಳ್ಳಿ ಗ್ರಾಮದ ಸಚಿನ್ ಜಿ.ಎಸ್ ಬಿನ್ ನರಸಿಂಹೇಗೌಡರವರಿಗೆ ವೈದ್ಯಕೀಯ ವೆಚ್ಚಕ್ಕೆ ಸಹಾಯಧನ	6371
10	14ನೇ ಹಣಕಾಸು ಯೋಜನೆ	2019-20	ಕರಡಹಳ್ಳಿ ಗ್ರಾಮದ ರಾಜಣ್ಣನ ಮನೆಯ ಹತ್ತಿರ ತೊಂಬೆ ನಿರ್ಮಾಣ ಕಾಮಗಾರಿ	40000
11	14ನೇ ಹಣಕಾಸು ಯೋಜನೆ	2019-21	ಗೌಡರಹಳ್ಳಿಯಿಂದ ನರಗನಹಳ್ಳಿ ಗ್ರಾಮಕ್ಕೆ ಹೋಗುವ ರಸ್ತೆ ಅಭಿವೃದ್ಧಿ ಕಾಮಗಾರಿ	55000
12	14ನೇ ಹಣಕಾಸು ಯೋಜನೆ	2019-22	ಗೌಡರಹಳ್ಳಿ ಗ್ರಾಮದ ನಾರಾಯಣಗೌಡ ರವರಿಗೆ ವೈದ್ಯಕೀಯ ವೆಚ್ಚಕ್ಕೆ ಸಹಾಯಧನ	5009
13	15ನೇ ಹಣಕಾಸು ಯೋಜನೆ	2020-21	ಕರಡಹಳ್ಳಿ ಗ್ರಾಮದ ಕೃಷ್ಣಪ್ಪನ ಮನೆ ಹತ್ತಿರ ಸಿಂಟೆಕ್ಸ್ ಮತ್ತು ಪೈಪ್ ಲೈನ್ ಕಾಮಗಾರಿ	40000
*			ಒಟ್ಟು ಮೊತ್ತ	492085